# ದೇವರು ಎಂದರೆ ಯಾರು? ಏನು?

ಎಲ್.ಜಿ.ನಾಗೇಶ್ ರಾವ್

ದೇವರನ್ನು ಕುರಿತ ಚಿಂತನೆ, ಚರ್ಚೆ ಅನಾದಿ ಕಾಲದ್ದು. ಆದರೆ ಇಂದಿಗೂ ಬಗೆಹರಿಯದ ಅನೇಕ ವಿಚಾರಗಳಲ್ಲಿ ಅಲೌಕಿಕ ಶಕ್ತಿಯಿದೆಯೆ? ಇದ್ದರೆ ಹೇಗಿದೆ? ಅದನ್ನು ಅನುಭವಿಸಬಹುದೆ – ಇವು ಕೂಡ ಮುಖ್ಯವಾದುವು. ಈ ಕುರಿತು ಚಿಂತನೆ ನಡೆಸಿರುವ ಲೇಖಕರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಾಯಕ ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸಿ, ನಿವೃತ್ತರಾಗಿದ್ದಾರೆ. ಅವರು ಭಾಷಾಂತರವೇ ಮೊದಲಾದ ಹಲವು ಸಾಹಿತ್ಯಿಕ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ. ಪ್ರಸ್ತುತ ಅವರು ಮೈಸೂರಿನಲ್ಲಿ ವಾಸವಾಗಿದ್ದಾರೆ.



ದೇವರು ಎಲ್ಲಿದ್ದಾನೆ ಎಂದು ಕೇಳಿದರೆ ಒಬ್ಬೊಬ್ಬರು ಒಂದೊಂದು ರೀತಿ ಹೇಳುತ್ತಾರೆ. ದೇವರು ವೈಕುಂಠದಲ್ಲಿ ಇದ್ದಾನೆಂದು ಕೆಲವರೂ, ದೇವರು ಕೈಲಾಸದಲ್ಲಿ ಇರುವನೆಂದು ಕೆಲವರೂ, ದೇವರು ಎಲ್ಲೆಲ್ಲೂ ಇರುವನೆಂದು ಕೆಲವರೂ ಹೇಳುವರು. ದೇವರು ನಮ್ಮ ಹೃದಯದಲ್ಲಿ ಇದ್ದಾನೆಂದು ಕೆಲವರು ಹೇಳುವರು. ದೇವಲೋಕ ಅಥವಾ ಸ್ವರ್ಗದ ಕಲ್ಪನೆ ಎಲ್ಲಾ ಮತ ಪಂಥಗಳಲ್ಲಿಯೂ ಕಂಡುಬರುತ್ತದೆ.

ಈ ಲೇಖನದಲ್ಲಿ ದೇವರು, ಪರಬ್ರಹ್ಮ, ಪರಮಾತ್ಮ ಭಗವಂತ ಮೊದಲಾದ ಪದಗಳನ್ನು ಸಮಾನಾರ್ಥದಲ್ಲಿ ಬಳಸಲಾಗಿದೆ.

## ಸತ್-ಚಿತ್-ಆನಂದ ಸ್ವರೂಪ

ಉಪನಿಷತ್ತುಗಳಲ್ಲಿ ಪರಬ್ರಹ್ಮವನ್ನು 'ಸತ್ ಚಿತ್ ಆನಂದ' ಎಂದು ವರ್ಣಿಸಲಾಗಿದೆ. ಅದು ಇರವು, ಅರಿವು ಮತ್ತು ಆನಂದ. ಈ ಜಗತ್ತು ಪರಬ್ರಹ್ಮನಿಂದ ಬಂದಿದೆ. ಅವ್ಯಕ್ತದಿಂದ ವ್ಯಕ್ತ ಜಗತ್ತು ಹೊರಹೊಮ್ಮಿದೆ. ಅದು ಅವನ ಲೀಲೆಗಾಗಿ ಸೃಷ್ಟಿಯಾಗಿದೆ. ಮತ್ತು ಪ್ರಳಯ ಕಾಲದಲ್ಲಿ ಭಗವಂತನಲ್ಲಿಯೇ ಲಯವಾಗುತ್ತದೆ. ನಿರಂತರ ಬದಲಾವಣೆಯ ಈ ಜಗತ್ತಿನಲ್ಲಿ ಸೃಷ್ಟಿ, ಸ್ಥಿತಿ ಲಯಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಸದ್ವಸ್ತುವು ನಾಶವಾಗುವುದಿಲ್ಲ.

**ಅವಿನಾಶಿ ತು ತದ್ವಿದ್ಧಿ ಯೇನ ಸರ್ವಮಿದಂ ತತಮ್ ।**
**ವಿನಾಶಮವ್ಯಯಸ್ಯಾಸ್ಯ ನ ಕಶ್ಚಿತ್ ಕರ್ತುಮರ್ಹತಿ ॥**

*(ಭಗವದ್ಗೀತೆ, ೨.೧೭)*

‘ಯಾವುದರಿಂದ ಈ ಸಂಪೂರ್ಣ ದೃಶ್ಯಜಗತ್ತು ವ್ಯಾಪ್ತವಾಗಿದೆಯೋ ಅದನ್ನು ನೀನು ನಾಶರಹಿತವೆಂದು ತಿಳಿ. ಅವಿನಾಶಿಯ ನಾಶವನ್ನು ಮಾಡಲು ಯಾರೂ ಕೂಡ ಸಮರ್ಥರಲ್ಲ.’

‘‘ದೇವರು ಎಂಬುದು ಒಂದು ಚೈತನ್ಯ, ತೇಜಸ್ಸು, ತತ್ತ್ವ ಅಥವಾ ಶಕ್ತಿ. ಅದರ ಮಹಿಮೆಗೆ ಒಳಪಡದ ವಸ್ತುವು ಈ ಪ್ರಪಂಚದಲ್ಲಿ ಯಾವುದೂ ಇರದು. ಎಲ್ಲಾ ಮನುಷ್ಯ ವ್ಯಾಪಾರಗಳೂ (human endeavour) ಅದಕ್ಕೇ ಅಧೀನವಾದವು. ಹೀಗೆ ದೇವರು ಸರ್ವಶಕ್ತನು, ಸರ್ವೇಶ್ವರನು, ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾದವನು.’’

ದೇವರು ವೈಕುಂಠದಲ್ಲಿಯೂ ಇದ್ದಾನೆ, ಕೈಲಾಸದಲ್ಲಿಯೂ ಇದ್ದಾನೆ, ಸರ್ವವ್ಯಾಪಿಯಾಗಿ ಜಗತ್ತಿನಲ್ಲಿಯೂ ಇದ್ದಾನೆ. ಎಲ್ಲ

ಪ್ರಾಣಿಗಳ ಹೃದಯದಲ್ಲಿಯೂ ಅಂತರ್ಯಾಮಿಯಾಗಿದ್ದಾನೆ. ಕಾಶಿ, ತಿರುಪತಿ, ಅಯೋಧ್ಯೆ, ಮಂತ್ರಾಲಯ, ಬೇಲೂರು ಮಠ ಮೊದಲಾದ ತೀರ್ಥಕ್ಷೇತ್ರಗಳಲ್ಲಿ ದೇವರ ವಿಶೇಷ ಸನ್ನಿಧಾನ ಉಂಟು. ಆ ಕ್ಷೇತ್ರಗಳಿಗೆ ಭಕ್ತರು, ಸಂತರು ಅವತಾರ ಪುರುಷರು ಹೋಗಿ ಆ ಕ್ಷೇತ್ರಗಳನ್ನು ಇನ್ನಷ್ಟು ಪವಿತ್ರಗೊಳಿಸಿರುತ್ತಾರೆ. '**ತೀರ್ಥೀಕುರ್ವಂತಿ ತೀರ್ಥಾನಿ**' ಎಂದು ನಾರದ ಭಕ್ತಿಸೂತ್ರಗಳಲ್ಲಿ ಹೇಳಿದೆ. ಶ್ರೀರಾಮಕೃಷ್ಣರು ಒಂದು ಉದಾಹರಣೆಯನ್ನು ಕೊಡುತ್ತಾರೆ. ಒಬ್ಬ ತೋಟದ ಮನೆಯ ಯಜಮಾನ ಎಲ್ಲಿ ಬೇಕಾದರೂ ಇರುತ್ತಾನೆ. ಆದರೆ ಹೆಚ್ಚಾಗಿ ಬೈಠಕ್ ಮನೆಯಲ್ಲಿ ಇರುತ್ತಾನೆ. ''ಅಲ್ಲಿಹನು ಇಲ್ಲಿಲ್ಲ ಎಂಬ ಸೊಲ್ಲು ಸಲ್ಲದು.''

ಭಗವಂತನ ಸ್ವರೂಪವನ್ನು ಕುರಿತು ಶ್ವೇತಾಶ್ವತರ ಉಪನಿಷತ್ತಿನಲ್ಲಿ ಒಂದು ಮಂತ್ರ ಹೀಗೆ ಹೇಳುತ್ತದೆ:

**ಏಕೋ ದೇವಃ ಸರ್ವಭೂತೇಷು ಗೂಢಃ**
**ಸರ್ವವ್ಯಾಪೀ ಸರ್ವಭೂತಾಂತರಾತ್ಮಾ ।**
**ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ**
**ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥** *(೬.೧೧)*

ದೇವರು ಒಬ್ಬನೇ; ಚರಾಚರ ಪ್ರಪಂಚದ ಒಳಗಿನ ಸತ್ತ್ವ ಅದು. ಒಂದು ಮಹಾ ಚೈತನ್ಯ ಅಥವಾ ಮಹಾಶಕ್ತಿ. ಅವನು ಎಲ್ಲಾ ವಸ್ತುಗಳಲ್ಲಿಯೂ ರಹಸ್ಯವಾಗಿ ಅಡಗಿಕೊಂಡಿರುವವನು. ಅವನು ಎಲ್ಲ ಭೂತಗಳಲ್ಲಿ–ಪ್ರಾಣಿಗಳಲ್ಲಿ–ಇರುವ ಪ್ರಾಣ ಅಥವಾ ಜೀವ. ದೇವರು ರಹಸ್ಯವಾಗಿದ್ದರೂ ಎಲ್ಲದರಲ್ಲಿಯೂ ಹರಡಿಕೊಂಡಿರುವವನು (ವ್ಯಾಪನೇ). 'ನಾನು ನಾನು' ಎಂದು ಯಾವುದು ತನ್ನನ್ನು ತಿಳಿದುಕೊಳ್ಳುತ್ತದೆಯೋ ಆ ವಸ್ತು – ಅದೇ ಚೈತನ್ಯ ಅಥವಾ ಶಕ್ತಿ. ಮನುಷ್ಯನು ಮಾಡುವ ಅಥವಾ ಮಾಡದೆ ಬಿಡುವ ಎಲ್ಲ ಕೆಲಸಗಳಿಗೂ ದೇವರು ಮೇಲ್ವಿಚಾರಕ, ಕರ್ಮಾಧ್ಯಕ್ಷ. ಅವನು ಧರ್ಮವನ್ನೂ ಮಾಡುವುದಿಲ್ಲ, ಅಧರ್ಮವನ್ನೂ ಮಾಡುವುದಿಲ್ಲ. ಅವನು ತಟಸ್ಥನಾಗಿರುವ ಆತ್ಮಚೈತನ್ಯ, ಕ್ಷೇತ್ರಜ್ಞ. ಮನುಷ್ಯನ ದೇಹ, ಮನಸ್ಸು, ಬುದ್ಧಿ, ಇಂದ್ರಿಯಗಳು – ಎಲ್ಲಕ್ಕೂ ಮೇಲ್ಪಟ್ಟಿರುವುದು ಈಶ್ವರ ತತ್ತ್ವ. ಅದು ಜಗತ್ತನ್ನು ನೋಡಿಕೊಂಡಿರುವ ತಟಸ್ಥ ಚೈತನ್ಯ–ಸಾಕ್ಷಿ. ಅದು ಕೇವಲ ತಾನೇ ತಾನಾಗಿರುವುದು (Absolute Supreme). ಅವನು ನಿರ್ಗುಣ ಎಂದರೆ ಯಾವ ನಿರ್ದಿಷ್ಟವಾದ ಗುಣವಿಲ್ಲ; ಎಲ್ಲಾ ಗುಣಗಳನ್ನು ಹೊಂದಿರುವವನು. ಕೇವಲ ಇರತಕ್ಕವನು. ಇನ್ನೊಂದು ಅರ್ಥದಲ್ಲಿ ಅವನು ಸತ್ತ್ವ, ರಜಸ್ಸು, ತಮಸ್ಸು ಎಂಬ ಗುಣಗಳಿಗೆ ಮೀರಿದವನು–ತ್ರಿಗುಣಾತೀತ–'**ಅನಿರ್ದೇಶ್ಯವಪುಃ ಶ್ರೀಮಾನ್.**'

### ದೇವರನ್ನು ಕಾಣಬಹುದೆ ?

ವಿಶ್ವವಿದ್ಯಾನಿಲಯದ ಪದವಿಯನ್ನು ಪಡೆದುಕೊಂಡಿದ್ದ, ತೀಕ್ಷ್ಣಮತಿಯಾದ ಯುವಕ ನರೇಂದ್ರನು (ಮುಂದೆ ಸ್ವಾಮಿ ವಿವೇಕಾನಂದರು) ತನ್ನ ಕಾಲದ ಅನೇಕ ವಿದ್ಯಾವಂತರಿಗೆ ಒಂದು ಪ್ರಶ್ನೆಯನ್ನು ಕೇಳುತ್ತಿದ್ದನು. ''ಮಹಾಶಯರೇ, ನೀವು ದೇವರನ್ನು ಕಂಡಿರುವಿರಾ?'' ಎಂದು. ಅದಕ್ಕೆ ಯಾರೂ ಸರಿಯಾದ ಉತ್ತರವನ್ನು ನೀಡಿರಲಿಲ್ಲ. ಅವನು ಇದೇ ಪ್ರಶ್ನೆಯನ್ನು ಶ್ರೀರಾಮಕೃಷ್ಣರಿಗೂ ಕೇಳಿದ. ಶ್ರೀರಾಮಕೃಷ್ಣರು ''ಹೌದು ನೋಡಿದ್ದೇನೆ. ನಾನು ನಿನ್ನೊಡನೆ ಮಾತನಾಡುತ್ತಿರುವಂತೆ ದೇವರೊಡನೆ ಮಾತನಾಡಬಹುದು'' ಎಂದು ಹೇಳಿದರು. ಅಷ್ಟೇ ಅಲ್ಲ ಅವನಿಗೆ ದೇವರ ದರ್ಶನವನ್ನು ಮಾಡಿಸಿದರು.

ದೈವ ಸಾಕ್ಷಾತ್ಕಾರವನ್ನು ಶ್ರದ್ಧೆ, ಭಕ್ತಿ ಮತ್ತು ತೀವ್ರವಾದ ವ್ಯಾಕುಲತೆಗಳ ಮೂಲಕ ಪಡೆಯಬಹುದು. ಅದು ವಾಙ್ಮನಾತೀತವಾದದ್ದು. ಮಾತು–ಮನಗಳನ್ನು ಮೀರಿದ್ದು. ಅದು ಏನೆಂದು ಹೇಳಲು ಆಗುವುದಿಲ್ಲ. ಪರಮಾತ್ಮಾನುಭವವನ್ನು ಪುಸ್ತಕಗಳನ್ನು ಓದುವುದರಿಂದ, ತರ್ಕದಿಂದ ಪಡೆಯಲಾಗುವುದಿಲ್ಲ. ಭಗವದ್ಗೀತೆಯಲ್ಲಿ ನಾಲ್ಕು ಸಾಧನಾಮಾರ್ಗಗಳನ್ನು ಹೇಳಲಾಗಿದೆ. ಇವುಗಳನ್ನು ಕರ್ಮಯೋಗ, ಭಕ್ತಿಯೋಗ, ಜ್ಞಾನಯೋಗ ಮತ್ತು ರಾಜಯೋಗ (ಧ್ಯಾನಯೋಗ) ಎಂದು ಕರೆಯುತ್ತಾರೆ. ಇವುಗಳನ್ನು ಕುರಿತು ಸ್ವಾಮಿ ವಿವೇಕಾನಂದರು ವಿವರವಾಗಿ ವ್ಯಾಖ್ಯಾನ ಮಾಡಿರುತ್ತಾರೆ. ಮೋಕ್ಷವನ್ನು ಶ್ರವಣ, ಮನನ ಮತ್ತು ನಿದಿಧ್ಯಾಸನಗಳಿಂದ ಪಡೆಯಬಹುದೆಂದು ಬೃಹದಾರಣ್ಯಕ ಉಪನಿಷತ್ತಿನಲ್ಲಿ ಯಾಜ್ಞವಲ್ಕ್ಯರು ಮೈತ್ರೇಯಿಗೆ ತಿಳಿಸುತ್ತಾರೆ.

**ಪುಸ್ತಕದಿ ದೊರೆತರಿವು ಮಸ್ತಕದಿ ತಳೆದ ಮಣಿ**
**ಚಿತ್ತದೊಳು ಬೆಳೆದರಿವು ತರುತಳೆದ ಪುಷ್ಪ**
**ವಸ್ತು ಸಾಕ್ಷಾತ್ಕಾರವಂತರೀಕ್ಷಣೆಯಿಂದ**
**ಶಾಸ್ತ್ರಿತನದಿಂದಲ್ಲ – ಮಂಕುತಿಮ್ಮ**

– ಎಂದು ಡಿ.ವಿ.ಜಿಯವರು 'ಮಂಕುತಿಮ್ಮನ ಕಗ್ಗ'ದಲ್ಲಿ ಹೇಳಿರುತ್ತಾರೆ.

### ಅರ್ಚಾವತಾರ ಮತ್ತು ಮೂರ್ತಿಪೂಜೆ

ಸಾಮಾನ್ಯ ಜನರು ದೇವಸ್ಥಾನಕ್ಕೆ ಹೋಗುತ್ತಾರೆ. ಅಲ್ಲಿರುವ ಮೂರ್ತಿಗೆ ಪೂಜೆ, ಮಂಗಳಾರತಿಗಳನ್ನು ಮಾಡುತ್ತಾರೆ. ತೀರ್ಥಪ್ರಸಾದಗಳನ್ನು ಸ್ವೀಕರಿಸುತ್ತಾರೆ. ಆ ವಿಗ್ರಹವು ದೇವರ ಪ್ರತೀಕ, ಕುರುಹು ಎಂದೂ ತಿಳಿಯುತ್ತಾರೆ. ಆದರೆ ಇಲ್ಲಿ ಒಂದು ವಿಶೇಷವಾದ ಸಂಗತಿ ಇದೆ. ಅದು ಭವ್ಯವಾದದ್ದು ಮತ್ತು ದಿವ್ಯವಾದದ್ದು. ಆ ವಿಗ್ರಹದಲ್ಲಿ ದೇವರ ಆವಾಹನೆಯಾಗಿದೆ. ಅದು ಜೀವಂತವಾದ ಚೈತನ್ಯಸ್ವರೂಪಿಯಾದ ದೇವರು. ಶ್ರೀಮದ್ ರಾಮಾನುಜಾಚಾರ್ಯರು ಪರಮಾತ್ಮನ ಐದು ರೂಪಗಳಲ್ಲಿ (ಪರಾ, ವ್ಯೂಹ, ವಿಭವ, ಅಂತರ್ಯಾಮಿ, ಅರ್ಚಾ) ವಿಗ್ರಹವು ಪರಮಾತ್ಮನ ಅರ್ಚಾ ರೂಪ ಎಂದು 'ಅವತಾರ' ಎಂಬ ತತ್ತ್ವವನ್ನು ತಿಳಿಸಿಕೊಟ್ಟಿರುತ್ತಾರೆ. ದೇವಾಲಯದ ಮೂರ್ತಿಯಲ್ಲಿ

ಸಾಕ್ಷಾತ್ ಚೈತನ್ಯ ಇದೆ. ಶ್ರದ್ಧೆ ಭಕ್ತಿಯುಳ್ಳವರಿಗೆ ಅದು ಅನುಭವ ವೇದ್ಯ. ಅದು ದೇವರ ಸಾನ್ನಿಧ್ಯ. ಜೀವಂತ ದೇವರು.

ದಕ್ಷಿಣೇಶ್ವರದ ದೇವಮಾನವರಾದ ಶ್ರೀರಾಮಕೃಷ್ಣರು ವಿಗ್ರಹ ದಲ್ಲಿ ಜೀವಂತ ಕಾಳೀಮಾತೆಯನ್ನು ಕಂಡರು. ಅವಳೊಡನೆ ಮಾತನಾಡುತ್ತಿದ್ದರು. ಆದರೆ ಎಲ್ಲರೂ ದೇವರನ್ನು ಕಾಣಲಾಗು ವುದಿಲ್ಲ, ಏಕೆಂದರೆ ಶ್ರದ್ಧೆ, ಭಕ್ತಿ, ವ್ಯಾಕುಲತೆ ಸಾಲದು.

ನಮ್ಮ ಮನೆಗಳಲ್ಲಿ ಪ್ರತಿವರ್ಷ ಆಚರಿಸುವ ಗೌರಿ, ಗಣೇಶ ಹಬ್ಬದ ಉದಾಹರಣೆಯನ್ನು ತೆಗೆದುಕೊಳ್ಳೋಣ. ವರಸಿದ್ಧಿವಿನಾ ಯಕ ವ್ರತವನ್ನು ಭಾದ್ರಪದ ಮಾಸದ ಶುಕ್ಲಪಕ್ಷದ ಚತುರ್ಥಿಯ ದಿನ ಆಚರಿಸುತ್ತೇವೆ. ಹಬ್ಬದ ಹಿಂದಿನ ದಿನವೇ ಮಣ್ಣಿನಲ್ಲಿ ಮಾಡಿದ ಗಣಪತಿಯ ವಿಗ್ರಹವನ್ನು ತರುತ್ತೇವೆ. ಮನೆಯನ್ನು ತಳಿರುತೋರಣಗಳಿಂದ ಅಲಂಕರಿಸುತ್ತೇವೆ. ಚೌತಿಯ ದಿವಸ ವಿಗ್ರಹಕ್ಕೆ ಷೋಡಶೋಪಚಾರ ಪೂಜೆಯನ್ನು ಮಾಡುತ್ತೇವೆ. ಈ ಉಪಾಸನೆಯಲ್ಲಿ ಪ್ರಾಣಪ್ರತಿಷ್ಠಾಪನೆ ಬಹಳ ಮುಖ್ಯವಾದದ್ದು. ಶಾಸ್ತ್ರೋಕ್ತ ಮಂತ್ರಗಳಿಂದ ಮಣ್ಣಿನ ವಿಗ್ರಹದಲ್ಲಿ ಭಗವಂತನನ್ನು, ಗಣಪತಿಯನ್ನು ಆವಾಹನೆ ಮಾಡುತ್ತೇವೆ. ''ಬಿಂಬೇಸ್ಮಿನ್ ಸನ್ನಿಧಿಂ ಕುರು'' ಎಂದು ಪ್ರಾರ್ಥಿಸುತ್ತೇವೆ. ಆಗ ಅಲ್ಲಿ ಗಣ ಪತಿಯ ಚೈತನ್ಯ ಸ್ವರೂಪ, ದಿವ್ಯಸನ್ನಿಧಿ ಉಂಟಾಗುತ್ತದೆ. ಪೂಜೆ ಗಳೆಲ್ಲ ಮುಗಿದ ನಂತರ ಗಣಪತಿಯ ವಿಸರ್ಜನೆ ಮಾಡುತ್ತೇವೆ. ಅನಂತರ ಅದು ಬರಿಯ ಮಣ್ಣಿನ ವಿಗ್ರಹ ಆಗುತ್ತದೆ. ಅದನ್ನು ನದಿಯಲ್ಲಿ, ಕೆರೆಯಲ್ಲಿ ವಿಸರ್ಜನೆ ಮಾಡುತ್ತೇವೆ.

### ದೇವರನ್ನು ಕಾಣುವ ಉಪಾಯಗಳು

ದೇವರನ್ನು ಕಾಣಲು ಕೆಲವು ಅರ್ಹತೆಗಳನ್ನು ಸಂಪಾದಿಸಿ ಕೊಳ್ಳಬೇಕು. ಶ್ರೀ ಶಂಕರಾಚಾರ್ಯರು 'ವಿವೇಕ ಚೂಡಾಮಣಿ' ಯಲ್ಲಿ ವಿವರಿಸಿರುವ ಸಾಧನ ಚತುಷ್ಟಯಗಳನ್ನು ಅನುಸಂಧಾನ ಮಾಡಬೇಕು. ೧) ನಿತ್ಯಾನಿತ್ಯವಸ್ತುವಿವೇಕ, ೨) ಇಹ-ಅಮುತ್ರ ಫಲಭೋಗ ವಿರಾಗ, ೩) ಶಮ, ದಮ, ಉಪರತಿ, ತಿತಿಕ್ಷೆ, ಶ್ರದ್ಧೆ, ಮತ್ತು ಸಮಾಧಾನ ಮತ್ತು ಕೊನೆಯದಾಗಿ ೪) ಮುಮುಕ್ಷುತ್ವ – ಇವುಗಳನ್ನು ಪಡೆದುಕೊಳ್ಳಬೇಕು. ನಿರಂತರ ಅಭ್ಯಾಸದಿಂದ, ನಾಮಸ್ಮರಣೆಯಿಂದ, ಸತ್ಸಂಗದಿಂದ ಶ್ರದ್ಧೆಯಿಂದ ನಂಬಿಕೆ ಯನ್ನು ಬಲಪಡಿಸಿಕೊಳ್ಳಬೇಕು. ನಮ್ಮಲ್ಲಿ ಅನೇಕರಿಗೆ ಆ ನಂಬಿಕೆ ಬಲವಾಗಿರುವುದಿಲ್ಲ. ಇದರ ಜೊತೆಗೆ ಗುರುವಿನ ಕೃಪೆ ಮತ್ತು ಮಾರ್ಗದರ್ಶನಬೇಕು. ಸನಾತನ ಧರ್ಮದಲ್ಲಿ ಗುರುವಿಗೆ, ಗುರುಕೃಪೆಗೆ ತುಂಬಾ ಮಹತ್ವವುಂಟು. ಸಾವಿರಾರು ವರ್ಷ ಗಳಿಂದ ಅವ್ಯಾಹತವಾಗಿ ನಡೆದು ಬಂದಿರುವ ಗುರುಪರಂಪರೆ ಗಳನ್ನು(ಮಠಗಳನ್ನು) ಕಾಣುತ್ತೇವೆ.

ನಿಷ್ಕಾಮ ಕರ್ಮದಿಂದ ಚಿತ್ತಶುದ್ಧಿ ಉಂಟಾಗುತ್ತದೆ. ಮನಸ್ಸು ಪ್ರಶಾಂತವಾಗುತ್ತದೆ. ಹೀಗೆ ಪರಿಶುದ್ಧವಾದ, ಸಾತ್ವಿಕ ವಾದ ಪುಣ್ಯಮಯ ಅಂತಃಕರಣವು ಭಗವಂತನ ದರ್ಶನಕ್ಕೆ ಯೋಗ್ಯವಾದುದಾಗಿರುತ್ತದೆ.

ನನಗೆ ದೇವರೇ ಬೇಕು, ಇನ್ನೇನೂ ಬೇಡ ಎಂಬ ತೀವ್ರ ಹಂಬಲ, ವ್ಯಾಕುಲತೆ ಇರಬೇಕು. ನೀರಿನಲ್ಲಿ ಮುಳುಗುತ್ತಿರು ವವನು ಉಸಿರಿಗಾಗಿ ಹಾತೊರೆಯುವಂತೆ ವ್ಯಾಕುಲತೆ ಇರ ಬೇಕು. ವ್ಯಾಕುಲತೆ ಉಂಟಾದರೆ ಅರುಣೋದಯವಾದಂತೆ, ಅನಂತರ ಸೂರ್ಯನ ಉದಯ ಆಗುತ್ತದೆ. ಬೆಳಕು, ಜ್ಞಾನದ ಬೆಳಕು – ಹರಿಯುತ್ತದೆ. ದಕ್ಷಿಣೇಶ್ವರದ ದೇವಾಲಯದಲ್ಲಿ ಸಾಯಂಕಾಲದ ಆರತಿಯ ಗಂಟೆ ಜಾಗಟೆಗಳ ಶಬ್ದ ಕೇಳಿದಾಗ ಶ್ರೀರಾಮಕೃಷ್ಣರು, ''ಅಯ್ಯೋ ಇನ್ನೂ ಒಂದು ದಿನ ಕಳೆದು ಹೋಯಿತು, ತಾಯಿಯ ದರ್ಶನವಾಗಲಿಲ್ಲ'' ಎಂದು ಗೋಳಿಡು ತ್ತಿದ್ದರು. ನೆಲದ ಮೇಲೆ ಬಿದ್ದು ಹೊರಳಾಡಿ ''ಅಮ್ಮಾ, ಅಮ್ಮಾ'' ಎಂದು ಅಳುತ್ತಿದ್ದರು. ಅದನ್ನು ನೋಡಿದ ಜನರು ''ಅಯ್ಯೋ ಪಾಪ, ಈತನ ತಾಯಿ ತೀರಿಕೊಂಡಿರಬೇಕು'' ಎಂದು ಕನಿಕರ ಪಡುತ್ತಿದ್ದರು. ನಾವೂ ಅಳುತ್ತೇವೆ. ಮನೆ, ಮಡದಿ ಮಕ್ಕಳಿಗಾಗಿ, ಪ್ರಾಪಂಚಿಕ ವಸ್ತುಗಳಿಗಾಗಿ ಕೊಡಗಟ್ಟಲೆ ಕಣ್ಣೀರು ಸುರಿಸುತ್ತೇವೆ. ಆದರೆ ನಿಜವಾಗಿ ನಮಗೆ ದೇವರು ಬೇಕಿಲ್ಲ.

ಮೇಲೆ ಹೇಳಿದ ಅರ್ಹತೆಗಳನ್ನು ಪಡೆದುಕೊಂಡವನು ದೇವ ಮಂದಿರದ ಮೂರ್ತಿಯಲ್ಲಿ ಅರ್ಚಾವತಾರವಾಗಿರುವ ಪ್ರತ್ಯಕ್ಷ ಚೈತನ್ಯ ದೇವನನ್ನು ಕಾಣಬಹುದು. ಶ್ರೀರಾಮಕೃಷ್ಣರು ಕಾಳೀ ಮಾತೆಯನ್ನು ಪ್ರತ್ಯಕ್ಷ ಕಂಡಿದ್ದು ಉತ್ತಮ ಉದಾಹರಣೆ. ನಮ್ಮ ಈ ಪುಣ್ಯಭೂಮಿಯಲ್ಲಿ ದೇವರ ದರ್ಶನ ಮಾಡಿದ ಅನೇಕ ಸಂತರು, ಭಕ್ತರು, ಅವತಾರ ಪುರುಷರು ಆಗಿಹೋಗಿದ್ದಾರೆ.

ರಾಜಯೋಗದ ಮೂಲಕ ಅಂದರೆ ಧ್ಯಾನದ ಮೂಲಕವೂ ಬ್ರಹ್ಮಾನುಭವವನ್ನು ಪಡೆಯಬಹುದು. ಪತಂಜಲಿ ಮಹರ್ಷಿ ಗಳ ಯೋಗ ಸೂತ್ರಗಳು ಉಪಯುಕ್ತ ಮಾರ್ಗದರ್ಶಿಯಾಗಿವೆ. ಧಾರಣ ಧ್ಯಾನ ಸಮಾಧಿಯ ಮಾರ್ಗದಲ್ಲಿ ಅನುಭವವನ್ನು ಪಡೆದುಕೊಳ್ಳಬಹುದು. ಅದು ವಾಙ್ಮನಾತೀತವಾದದ್ದು. ಮಾತಿಗೆ ನಿಲುಕಲಾರದ್ದು. ಅದು ಮೂಕ ಬೆಲ್ಲ ಮೆದ್ದಂತೆ. ಉಪ್ಪಿನ ಗೊಂಬೆಯು ಸಾಗರದ ಆಳವನ್ನು ಕಂಡು ಹಿಡಿಯಲು ಹೋದ ಹಾಗೆ ಅನಿರ್ವಚನೀಯ. ✸


***ಆಕರ ಗ್ರಂಥಗಳು:***

*೧) ಡಿ.ವಿ.ಜಿ ಯವರ '**ದೇವರು**' ಎಂಬ ಪುಸ್ತಕ*

*೨) ಪ್ರೇರಣೆ: ಶ್ರೀರಾಮಕೃಷ್ಣ ಮಠ, ಬೆಂಗಳೂರಿನಲ್ಲಿ ೨೦.೧೧.೨೨ ರಂದು ಸ್ವಾಮಿ ಸರ್ವಪ್ರಿಯಾನಂದರು ಮಾಡಿದ ಉಪನ್ಯಾಸ*

***೩) 'ಶ್ರೀರಾಮಕೃಷ್ಣ ವಚನವೇದ.'***